# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,–731/2017/ಡಿ.ಆರ್.ಇ–2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 11/09/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಕಾವಳ ಮೂಡೂರು ಗ್ರಾಮದ ಕಾವಳಕಟ್ಟೆ ಕಳಾಯಿ ಮನೆ ಗಣೇಶ್ ನಾಯ್ಕ ಇವರ ಜಮೀನಿನ ಬಳಿ ಇರುವ ತೋಡಗೆ ತಡೆ ಗೋಡೆ ನಿರ್ಮಾಣ ಮಾಡುವ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಗಣೇಶ ನಾಯಕ್ ಬಿನ್ ವಾಸುದೇವ ನಾಯಕ್, ಕಳಾಯಿಮನೆ, ಕಾವಳಕಟ್ಟೆ ಅಂಚೆ, ಕಾವಳಮೂಡೂರು ಗ್ರಾಮ, ಬಂಟ್ವಾಳ ತಾಲ್ಲೂಕ್, ದಕ್ಷಿಣ ಕನ್ನಟ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ತಹಶೀಲ್ದಾರ್, ಬಂಟ್ವಾಳ ತಾಲ್ಲೂಕ್ ಕಛೇರಿ, ಬಂಟ್ವಾಳ ತಾಲ್ಲೂಕ್, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಬಂಟ್ವಾಳ ತಾಲ್ಲೂಕಿನ ಕಾವಳ ಮೂಡೂರು ಗ್ರಾಮದ ಕಳಾಯಿ ಎಂಬಲ್ಲಿ ಕಳಾಯಿ–ನೆಲ್ಲಿಗುಡ್ಡೆ–ಮುಲ್ಕಾಜೆ ಮೂಡ ಸಂಪರ್ಕಸ ಸಾರ್ವಜನಿಕ ಕಾಲು ಮಳೆಯಿಂದಾಗಿ ಕಡಿದುಬಿದ್ದಿದ್ದು ಸಾರ್ವಜನಿಕರಿಗೆ ನಡೆದಾಡಲು ಕೂಡ ಕಷ್ಟವಾಗುತ್ತಿದೆ. ಸುಮಾರು '80 ಫೀಟ್' ಉದ್ದದಲ್ಲಿ ಸಂಪೂರ್ಣ ಕುಸಿದುಬಿದಿರುತ್ತದೆ. ಈ ರೀತಿ ಪ್ರಕೃತಿ ವಿಕೋಪದಿಂದ ಉಂಟಾದ ನಷ್ಟವನ್ನು ಸರ್ಕಾರದಿಂದ ನೀಡಲ್ಪಡುವ ವಿಶೇಷ ಅಭಿವೃದ್ಧಿ ಅನುದಾನದಿಂದ ಸರಿಪಡಿಸಿಕೊಡಬೇಕಾಗಿ ಎದುರುದಾರರನ್ನು ಕೋರಿಕೊಂಡರೂ, ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

3. ದೂರುದಾರರ ದೂರು ಮತ್ತು ದಾಖಲೆಗಳನ್ನು ಪರಿಶೀಲಿಸಿ ಎದುರುದಾರರಿಗೆ ಆಕ್ಷೇಪಣೆ ಸಲ್ಲಿಸುವಂತೆ ಕೋರಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ ಅದರಲ್ಲಿ, ದೂರುದಾರರಾದ ಶ್ರೀ ಗಣೇಶ್ ನಾಯ್ಕ ದಿನಾಂಕ: 15/06/2013 ರಂದು ತಮ್ಮ ಕಛೇರಿಗೆ ಅರ್ಜಿ ಸಲ್ಲಿಸಿದ ಬಗ್ಗೆ ಹಾಗೂ ಸದರಿ ಅರ್ಜಿಯನ್ನು ತಮ್ಮ ಕಛೇರಿಯಲ್ಲಿ ಸ್ವೀಕರಿಸಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಅಲ್ಲದೇ, ಅರ್ಜಿದಾರರ ಅರ್ಜಿಯ ಮೇಲೆ ತಾವು ತಮ್ಮ ಕಛೇರಿಯಿಂದ ಸ್ವೀಕರಿಸಿದ ಬಗ್ಗೆ ಯಾವುದೇ ಮೊಹರು ಅಥವಾ ಸಹಿ ಇರುವುದಿಲ್ಲ. ಅಲ್ಲದೇ, ಕಾಮಗಾರಿ ನಡೆಸಿದ ಬಗ್ಗೆ ತಡೆ ಗೋಡೆ ನಿರ್ಮಿಸುವುದು ಕಂದಾಯ ಇಲಾಖೆಯಲ್ಲಿ ಅವಕಾಶ ಇರುವುದಿಲ್ಲ. ತಡೆ ಗೋಡೆ ನಿರ್ಮಿಸುವ ಕಾಮಗಾರಿಗಳನ್ನು ಮಾಡುವುದು ಸಣ್ಣ ನೀರಾವರಿ ಇಲಾಖೆಗೆ ಸೇರಿದ್ದಾಗಿದೆಯೆಂದು ತಿಳಿಸಿದ್ದಾರೆ. ಅಲ್ಲದೇ, ದಿನಾಂಕ: 13/06/2017 ರಂದು ಕಂದಾಯ ನಿರೀಕ್ಷಕರು ದೂರುದಾರರು ತಮ್ಮ ಅರ್ಜಿಯಲ್ಲಿ ತಿಳಿಸಿರುವ ವಿಚಾರದ ಬಗ್ಗೆ ತನಿಖೆ ನಡೆಸಿ ವರದಿ ನೀಡಿದ್ದು, ಅದರಲ್ಲಿ ಬಂಟ್ವಾಳ ತಾಲ್ಲೂಕು ಕಾವಳ ಮೂಡೂರು ಗ್ರಾಮದ ಕಳಾಯಿ ಎಂಬಲ್ಲಿ 2013ರಲ್ಲಿ ಕಾಲು ದಾರಿ ಕುಸಿದಿದ್ದು, ಪ್ರಸ್ತುತ ತಾತ್ಕಾಲಿಕ ಕಾಲು ಸೇತುವೆ ನಿರ್ಮಿಸಿ ಅದರ ಮೂಲಕ ಜನ ಸಂಚರಿಸುತ್ತಿದ್ದಾರೆ. ಪ್ರಸ್ತುತ ಕಾಲು ದಾರಿ ಕುಸಿದಿರುವುದು ಕಂಡುಬಂದಿಲ್ಲವೆಂದು ಆಕ್ಷೇಪಣೆ ಸಲ್ಲಿಸಿದ್ದಾರೆ.

4. ದೂರುದಾರರು ಪ್ರತ್ಯುತ್ತರ ಸಲ್ಲಿಸಿ ಎದುರುದಾರರ ಆಕ್ಷೇಪಣೆಗಳನ್ನು ನಿರಾಕರಿಸಿದ್ದಾರೆ. ಅಲ್ಲದೇ, ಸರ್ಕಾರದಿಂದ ಸಂಬಂಧಪಟ್ಟ ಸಣ್ಣ ನೀರಾವರಿ ಇಲಾಖೆಯಿಂದಾಗಲೀ ಅಥವಾ ಗ್ರಾಮ ಪಂಚಾಯತಿಯಿಂದಾಗಲೀ ತಡೆ ಗೋಡೆ ಕಟ್ಟಿಸಿ ಕೊಡಬೇಕೆಂದು, ಇಲ್ಲದಿದ್ದರೆ ಅದಕ್ಕೆ ತಹಶೀಲ್ದಾರ್ ರವರೇ ಹೊಣೆಗಾರರಾಗುತ್ತಾರೆಂದು ಉಲ್ಲೇಖಿಸಿದ್ದಾರೆ.

5. ದಿನಾಂಕ: 28/01/2018 ರಂದು ಮಂಗಳೂರಿನಲ್ಲಿ ನಡೆದ ಕ್ಯಾಂಪ್‌ನಲ್ಲಿ ದೂರುದಾರ ಹಾಗೂ ಎದುರುದಾರರು ಹಾಜರಿದ್ದರು. ಎದುರುದಾರರು ದೂರುದಾರರು ಹೇಳಿರುವ ಕಾಲು ದಾರಿಯ ಕೆಲಸವನ್ನು ನೀರಾವರಿ ಇಲಾಖೆಯವರು ಮಾಡಬೇಕೆಂದು ತಿಳಿಸಿದ್ದಾರೆ. ಅಲ್ಲೇ ಹಾಜರಿದ್ದ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ ದೂರುದಾರರು ಹೇಳಿರುವ ಸ್ಥಳವನ್ನು ಪರಿಶೀಲಿಸಿ ಅಗತ್ಯವಿದ್ದರೆ ಸದರಿ ಕಾಲು ದಾರಿಯ ದುರಸ್ಥಿ ಕಾರ್ಯವನ್ನು ಮಾಡಿಕೊಡುವುದಾಗಿ ತಿಳಿಸಿದ್ದಾರೆ. ಮಾನ್ಯ ಗೌರವಾನ್ವಿತರು ದಿನಾಂಕ: 24/07/2018 ರೊಳಗಾಗಿ ಸದರಿ ಕಾಮಗಾರಿಯನ್ನು

ಮಾಡಿಕೊಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ ಇವರಿಗೆ ನಿರ್ದೇಶನ ನೀಡಿದ್ದರು.

6. ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ರವರು ಬರೆದ ಪತ್ರ ದಿನಾಂಕ: 03/09/2018 ರಂದು ಬಂದಿದ್ದು, ಅದನ್ನು ಪರಿಶೀಲಿಸಿದಾಗ, ದೂರುದಾರರು ಹೇಳಿರುವ ಪ್ರದೇಶದಲ್ಲಿ ತಡೆ ಗೋಡೆ ನಿರ್ಮಿಸಲು ರೂ. 10 ಲಕ್ಷ ಹಣದ ಅವಶ್ಯಕತೆ ಇದ್ದು, ಸೂಕ್ತ ಅನುದಾನ ದೊರಕಿಸಿಕೊಡಲು ಮುಖ್ಯ ಅಭಿಯಂತರರು, ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ (ದ), ವಲಯ, ಬೆಂಗಳೂರು ಇವರಿಗೆ ದಿನಾಂಕ: 27/04/2018 ರಂದು ಪ್ರಸ್ತಾವನೆ ಸಲ್ಲಿಸಿಲಾಗಿದೆ. ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಕಾಮಗಾರಿಯನ್ನು ಕೈಗೊಳ್ಳಬಹುದಾಗಿದೆಯೆಂದು ತಿಳಿಸಿದ್ದಾರೆ.

7. ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗದವರಿಂದ ದಿನಾಂಕ: 19/12/2018 ರಂದು ಪತ್ರ ಬಂದಿದ್ದು, ಅದರಲ್ಲಿ, ಮುಖ್ಯ ಅಭಿಯಂತರರು, ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ (ದ), ವಲಯ, ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: ಮುಸದ/ತಾಂಶಾ4/ಸಇಂ9/2018/2404, ದಿನಾಂಕ: 31/10/2018 ಅದರಲ್ಲಿ ಬಂಟ್ವಾಳ ತಾಲ್ಲೂಕು ಕಾವಳ ಮೂಡೂರು ಗ್ರಾಮದ ಕಾವಳಕಟ್ಟೆ ಕಳಾಯಿ ಮನೆ ಗಣೇಶ್ ನಾಯ್ಕ ಇವರ ಜಮೀನಿನ ಬಳಿ ಇರುವ ತೋಡಗೆ ತಡೆ ಗೋಡೆ ನಿರ್ಮಾಣ ಮಾಡುವ ಕಾಮಗಾರಿ ಕೈಗೊಳ್ಳಲು 2018–19ನೇ ಸಾಲಿನಲ್ಲಿ ಸೂಕ್ತ ಅನುದಾನದೊಂದಿಗೆ ಅನುಮೋದನೆ ಕೋರಲಾಗಿರುತ್ತದೆಂದು ತಿಳಿಸಿದ್ದಾರೆ.

8. ಈ ಬಗ್ಗೆ ಸರ್ಕಾರದ ಕಾರ್ಯದರ್ಶಿಯವರಿಗೆ ತಾವು ತೆಗೆದುಕೊಂಡ ಕ್ರಮದ ಬಗ್ಗೆ ಕೋರಲಾಗಿ, ಅವರು ದಿನಾಂಕ: 19/07/2019 ರಂದು ಪತ್ರ ಬರೆದು ದೂರುದಾರರ ದೂರಿನಲ್ಲಿ ಹೇಳಿರುವ ತಡೆ ಗೋಡೆ ಕಾಮಗಾರಿಗಾಗಿ ರೂ. 15 ಲಕ್ಷ ಅಂದಾಜು ಮೊತ್ತವನ್ನು ಕಾಮಗಾರಿ 2018–19ನೇ ಸಾಲಿನಲ್ಲಿ ಕೈಗೊಳ್ಳಲು ಅನುಮೋದನೆಯಾಗಿದೆ ಎಂದು ತಿಳಿಸಿದ್ದಾರೆ.

9. ದೂರುದಾರರ ದೂರು, ಎದುರುದಾರರ ಆಕ್ಷೇಪಣೆ, ಮುಖ್ಯ ಅಭಿಯಂತರರು, ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ (ದ), ವಲಯ, ಬೆಂಗಳೂರು ಪತ್ರ ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರ ಪತ್ರವನ್ನು ಪರಿಶೀಲಿಸಿದಾಗ, ದೂರುದಾರರು ಹೇಳಿರುವ ಕಾವಳ ಮೂಡೂರು ಗ್ರಾಮದ ಕಾವಳಕಟ್ಟೆ ಕಳಾಯಿ ಮನೆ ಗಣೇಶ್ ನಾಯ್ಕ ಇವರ ಜಮೀನಿನ ಬಳಿ ಇರುವ ತೋಡಗೆ ತಡೆ ಗೋಡೆ ನಿರ್ಮಾಣ ಮಾಡುವ ಕಾಮಗಾರಿಯನ್ನು ನಿರ್ವಹಿಸುವ ಹೊಣೆಗಾರಿಕೆ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರು ಎದುರುದಾರರು ದಿನಾಂಕ: 15/06/2013 ರಂದು ತಾವು ನೀಡಿದ ಅರ್ಜಿಯ ಮೇಲೆ ಯಾವುದೇ ಕ್ರಮ ಜರುಗಿಸದೇ ಕರ್ತವ್ಯ ಲೋಪ ಎಸಗಿದ್ದಾರೆಂದು ಮಾಡಿರುವ ಆಪಾದನೆ ಒಪ್ಪಲು ಆಗುವುದಿಲ್ಲ. ಏಕೆಂದರೆ, ಸದರಿ ಮೇಲೆ ಉಲ್ಲೇಖಿಸಿದ ಕಾಮಗಾರಿಯನ್ನು ಕೈಗೊಳ್ಳುವ ಜವಾಬ್ದಾರಿ ಎದುರುದಾರರಿಗೆ ಸಂಬಂಧಪಟ್ಟಿರುವುದಿಲ್ಲ ಬದಲಾಗಿ, ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಮಾಡಿರುವ ಆಪಾದನೆಯನ್ನು ಕೈಬಿಡುವುದು ಸಮಂಜಸವಾಗುತ್ತದೆ.

10. ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರ ಪತ್ರವನ್ನು ಪರಿಶೀಲಿಸಿದಾಗ, ಕಾವಳ ಮೂಡೂರು ಗ್ರಾಮದ ಕಾವಳಕಟ್ಟೆ ಕಳಾಯಿ ಮನೆ ಗಣೇಶ್ ನಾಯ್ಕ ಇವರ ಜಮೀನಿನ ಬಳಿ ಇರುವ ತೋಡಗೆ ತಡೆ ಗೋಡೆ ನಿರ್ಮಾಣ ಮಾಡುವ ಕಾಮಗಾರಿಯನ್ನು ನಿರ್ವಹಿಸುವ 2018–19ನೇ ಸಾಲಿನಲ್ಲಿ ಕೈಗೊಳ್ಳಲು ಅನುಮೋದನೆ ಆಗಿದ್ದು, ಅಂದಾಜು ಮೊತ್ತ ರೂ. 15 ಲಕ್ಷ ಅನುಮೋದನೆಯಾಗಿದೆ ಎಂದು ಕಂಡುಬರುತ್ತದೆ.

11. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಕಾವಳ ಮೂಡೂರು ಗ್ರಾಮದ ಕಾವಳಕಟ್ಟೆ ಕಳಾಯಿ ಮನೆ ಗಣೇಶ್ ನಾಯ್ಕ ಇವರ ಜಮೀನಿನ ಬಳಿ ಇರುವ ತೋಡಗೆ ತಡೆ ಗೋಡೆ ನಿರ್ಮಾಣ ಮಾಡುವ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಿಯಾದ ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.